# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/199/15-16 ದಿನಾಂಕ : 08-07-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಶಿವರಾಮ ತಂದೆ ದೊಡ್ಡ ಗುಂತಕಲ್ಲಪ್ಪ | 1)ಉಪ ತಹಶೀಲ್ದಾರರು ಕುರುಗೋಡು |
| ಹಲಕುಂದಿ ಗ್ರಾಮ ಬಳ್ಳಾರಿ ತಾಲೂಕು | 2)ಕಂದಾಯ ನಿರೀಕ್ಷಕರು ಕುರುಗೋಡು |
| (ಶ್ರೀ ಡಿ.ನಾರಾಯಣ ವಕೀಲರು ಬಳ್ಳಾರಿ) | 3)ಗ್ರಾಮಲೆಕ್ಕಾಧಿಕಾರಿಗಳು ಹಾವಿನಾಳ್ ವಿರಾಪುರ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಹಾವಿನಾಳ್ ವೀರಾಪುರ | 152ಎಫ್(ಪಿ)<br>152ಡಿ/1ಎ | 0.84, 1.14, 0.84 ಮತ್ತು 0.76 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಕುರುಗೋಡು ಇವರ ಎಂ ಆರ್ ನಂ 106/07-08 ದಿನಾಂಕ 16-01-2008 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 01-04-2016 ಮತ್ತು 08-07-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು 08-07-2016 ರಂದು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ವಾದಿಗಳು ಬಳ್ಳಾರಿ ತಾಲ್ಲೂಕು ಹಾವಿನಾಳ್ ವಿರಾಪುರ ಗ್ರಾಮದ ಸ.ನಂ 152ಎಫ್ ಪೈಕಿ ಮತ್ತು 152ಡಿ/1ಎ ವಿಸ್ತೀರ್ಣ ಕ್ರಮವಾಗಿ 0.84, 1.14, 0.84 ಮತ್ತು 0.76 ಎಕರೆ ಜಮೀನನ್ನು ನೊಂದಾಯಿತ ಕ್ರಯ ಪತ್ರ 3910/2007-08 ದಿನಾಂಕ 24-03-2008 ರಂದು **ಶ್ರೀ ಎಸ್ ಎಂ.ಚಂದ್ರಯ್ಯ ಸ್ವಾಮಿ, ಶ್ರೀ ಇಪ್ಪರ ಮಲ್ಲಪ್ಪ, ಮತ್ತು ಶ್ರೀ ಈಶ್ವರಗೌಡ** ಹಾವಿನಾಳ್ ವೀರಾಪುರ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಕ್ರಯ ಹೊಂದಿದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಕುರುಗೋಡು ಇವರ ಹಕ್ಕುಬದಲಾವಣೆ ಸಂಖ್ಯೆ 106/07-08 ದಿನಾಂಕ 16-06-2008 ರಂದು ಹಕ್ಕು ಬದಲಾವಣೆಯನ್ನು ನಮೂನೆ 21 ತಪ್ಪಾಗಿದ್ದು ಕಾರಣ ಮರು ನಮೂನೆ 21 ತೆಗೆಯುವ ಕುರಿತು ಗೈರು ಮಂಜೂರು ಮಾಡಿರುತ್ತಾರೆ, ಸದರಿ ಗೈರು ಮಂಜೂರು ವಿರುದ್ಧ ಮೇಲ್ಮನವಿ ಸಲ್ಲಿಸುತ್ತಾ, ಹಕ್ಕುಬದಲಾವಣೆ ಮಾಡಿಕೊಡಲು ಮೇಲ್ಮನವಿದಾರರು ಕೋರಿರುತ್ತಾರೆ.

ಮುಂದಿನ ಪುಟಕ್ಕೆ....